# ಇನ್ಫೋಸಿಸ್ ಪ್ರತಿಷ್ಠಾನದ ವತಿಯಿಂದ 10 ಲಕ್ಷ ಮೌಲ್ಯದ ಪುಸ್ತಗಳ ಕೊಡುಗೆ

ಹೊಳೆನರಸೀಪುರ : ಬೆಂಗಳೂರಿನ ಇನ್ಫೋಸಿಸ್ ಪ್ರತಿಷ್ಠಾನದ ಮುಖ್ಯಸ್ಥರಾದ ಪದ್ಮಶ್ರೀ ಸುಧಾ ನಾರಾಯಣಮೂರ್ತಿ ತಾಲೂಕಿಗೆ ಭಾನುವಾರ ಭೇಟಿ ನೀಡಿ ತಮ್ಮ ಇನ್ಫೋಸಿಸ್ ಪ್ರತಿಷ್ಠಾನದ ವತಿಯಿಂದ ಶಾಲೆಗೊಂದು ಗ್ರಂಥಾಲಯ ಕಾರ್ಯಕ್ರಮದಡಿಯಲ್ಲಿ 10 ಲಕ್ಷರೂ ಮೌಲ್ಯದ ಪುಸ್ತಕಗಳನ್ನು ಶಾಲೆಗಳಿಗೆ ದೇಣಿಗೆ ನೀಡಿದರು.

ಪಟ್ಟಣದ ಸರ್ಕಾರಿ ನರ್ಸಿಂಗ್ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಸಮಾರಂಭವನ್ನು ಉದ್ಘಾಟಿಸಿದ ಮಾತನಾಡಿದ ಅವರು, ಸರ್ಕಾರವು ಶಾಲೆಗಳಿಗೆ ನೀಡುವ ಪುಸ್ತಕಗಳ ಹೊರತಾಗಿ ತಮ್ಮ ಪ್ರತಿಷ್ಠಾನದ ವತಿಯಿಂದ ಕಳೆದ 15 ವರ್ಷಗಳಿಂದಲೂ ರಾಜ್ಯವಷ್ಟೇ ಅಲ್ಲದೆ ವಿವಿಧ ರಾಜ್ಯಗಳಲ್ಲಿನ ಶಾಲೆಗಳಿಗೂ ಪುಸ್ತಕಗಳನ್ನು ದೇಣಿಗೆಯಾಗಿ ನೀಡಲಾಗುತ್ತಿದೆ ಎಂದು ಹೇಳಿದ ಅವರು ಇದುವರೆವಿಗೂ ಸುಮಾರು 35 ಸಾವಿರ ಶಾಲೆಗಳಿಗೆ 25ಕೋಟಿ ರೂ ವೆಚ್ಚದಲ್ಲಿ ಪುಸ್ತಕಗಳನ್ನು ದೇಣಿಗೆಯಾಗಿ



ನೀಡಲಾಗಿದೆ ಎಂದು ತಿಳಿಸಿದರು.

ಮಕ್ಕಳು ಜ್ಞಾನದ ಆಗರವಾಗಬೇಕು ಎನ್ನುವ ದೃಷ್ಟಿಯಿಂದ ಶಿಕ್ಷಕರು ಶಿಕ್ಷಣವನ್ನು ನೀಡುವ ಜೊತೆಗೆ ಮಕ್ಕಳಲ್ಲಿ ಉತ್ತಮ ಸಾಹಿತ್ಯವನ್ನು ಓದುವ ಹವ್ಯಾಸವನ್ನು ಬೆಳೆಸುವಂತೆ ಕಿವಿಮಾತು ಹೇಳಿದ ಸುಧಾ ಮೂರ್ತಿ ಅವರು ತಮ್ಮ ಈ ಸಾಹಿತ್ಯ ಸೇವೆಯನ್ನು ಗುರುತಿಸಿ ಬಹಳಷ್ಟು ಪ್ರಶಸ್ತಿಗಳು ಬಂದಿದೆ, ಆದರೆ ನಮ್ಮೊಳಗಿನ ನಮ್ಮ ಪಯಣದಲ್ಲಿ ಸಿಗುವ ನೆಮ್ಮದಿಗಿಂತಲೂ ಹೊರಗಿನ ಪ್ರಶಸ್ತಿ ದೊಡ್ಡದಲ್ಲ ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಚ್.ಡಿ.ರೇವಣ ಮಾತನಾಡಿ ಶಾಲಾ ಮಕ್ಕಳಿಗೆ ಸಾಹಿತ್ಯದ ಪುಸ್ತಕಗಳನ್ನು ದೇಣಿಗೆಯಾಗಿ ನೀಡುವ ಮೂಲಕ ಸಾಹಿತ್ಯ ಸೇವೆ ಮಾಡುತ್ತಿರುವ ಸುಧಾ ಮೂರ್ತಿ ಅವರು ಗ್ರಾಮೀಣ ಪ್ರದೇಶದ ಮಕ್ಕಳ ಶೈಕ್ಷಣಿಕ ಪುನರು ಜ್ಜೀವನದ ಆಶಾಕಿರಣವಾಗಿದ್ದಾರೆ ಎಂದು ಹೇಳಿದರು. ಇಂದಿನ ದಿನಗಳಲ್ಲಿ ಸಂಪತ್ತನ್ನು ಹೊಂದಿರುವವರೆಲ್ಲರೂ ದಾನ ಮಾಡುವುದು ಕಷ್ಟ, ಆದರೆ ಸುಧಾಮೂರ್ತಿ ಅವರ ಕೊಡುಗೈ ದಾನದ ಮನಸ್ಸು ಶ್ಲಾಘನೀಯ ಎಂದು ಹೇಳಿದರು.

ಸಾ.ಶಿ.ಇಲಾಖೆಯ ಉಪ-ನಿರ್ದೇಶಕರಾದ ಎ.ಟಿ.ಚಾಮುರಾಜ್ ಮಾತನಾಡಿದರು. ರೇವಣ್ಣ ಅವರ ಪತ್ನಿ ಭವಾನಿರೇವಣ್ಣ, ತಹಸೀಲ್ದಾರ್ ವಿ.ಮಂಜುನಾಥ್. ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ಕೆ.ಶಿವರಾಜ್, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಟಿ.ಮಲ್ಲೇಶ್, ಜಿ.ಪಂ ಸದಸ್ಯ ದೇವೇಗೌಡ, ಇತರರು ಇದ್ದರು.

# ಒಡವೆ, ವಸ್ತ್ರಗಳಿಗಿಂತ ಧೈರ್ಯ -ಜ್ಞಾನವೇ ಮುಖ್ಯ : ಸುಧಾಮೂರ್ತಿ

ಹೊಳೆನರಸೀಪುರ: " ಹೆಣ್ಮಕ್ಕಳಿಗೆ ಪೌಡರ್ ಲಿಪ್‌ಸ್ಟಿಕ್, ಒಡವೆ, ವಸ್ತ್ರಗಳಿಗಿಂತ ಧೈರ್ಯ ಮತ್ತು ಜ್ಞಾನವೇ ಮುಖ್ಯ." ಆದ್ದರಿಂದ ನೀವು ನಿಮ್ಮ ಮನೆಯಲ್ಲೇ ಆಗಲಿ ಅಥವಾ ಹೊರಗಡೆಯೇ ಆಗಲಿ ತಪ್ಪುಗಳನ್ನು ಕಂಡಾಗ ಖಂಡಿಸುವ ಧೈರ್ಯ ತೋರಿ ಎಂದು ಇನ್ಫೋಸಿಸ್ ಪ್ರತಿಷ್ಠಾನದ ಸುಧಾಮೂರ್ತಿ ಸಲಹೆ ನೀಡಿದರು.

ಪ್ರತಿಷ್ಠಾನದ ವತಿಯಿಂದ ಶಾಲೆಗೊಂದು ಗ್ರಂಥಾಲಯ ಕಾರ್ಯಕ್ರಮದಡಿಯಲ್ಲಿ ಪುಸ್ತಕಗಳನ್ನು ನೀಡಲು ಭಾನುವಾರ ಇಲ್ಲಿಗೆ ಆಗಮಿಸಿದ್ದಾಗ ಪೂರ್ಣ ಕುಂಭ ಸ್ವಾಗತ ನೀಡಿದ ಇಲ್ಲಿನ ಬಾಲಕಿಯರ ಪದವಿಪೂರ್ವ ಸರ್ಕಾರಿ ಕಾಲೇಜಿನ ವಿದ್ಯಾರ್ಥಿನಿಯರನ್ನು ಕುರಿತು ಮಾತನಾಡಿ ನಿಮ್ಮಲ್ಲಿ ಧೈರ್ಯ ಮತ್ತು ಜ್ಞಾನ ಹೆಚ್ಚಾಗಬೇಕೆಂದರೆ ನೀವು ಹೆಚ್ಚೆಚ್ಚು ಉತ್ತಮ ಪುಸ್ತಕಗಳನ್ನು



ಓದಬೇಕು. ಮಹಿಳೆಯರಿಗೆ ತಾಳ್ಮೆ ಮತ್ತು ಇಚ್ಛಾಶಕ್ತಿ, ಸಾಧಿಸುವ ಛಲ ಹೆಚ್ಚು. ಆದ್ದರಿಂದ ಪ್ರತೀ ಯಶಸ್ವೀ ಪುರುಷನ ಹಿಂದೆ ಮಹಿಳೆ ಇರುತ್ತಾಳೆ ಎನ್ನುತ್ತಾರೆ. ನಮ್ಮ ಮನಯವರೂ ಹಾಗೇ ಹೇಳುತ್ತಾರೆ ಎಂದು ನುಡಿದರು. ಪ್ರತಿಯೊಬ್ಬರಲ್ಲೂ ಪ್ರತಿಭೆ ಇರುತ್ತದೆ. ಅದನ್ನು ಧೈರ್ಯವಾಗಿ ಪ್ರದರ್ಶಿಸಬೇಕು ಎಂದು ನುಡಿದರು.

ನಂತರ ಇಲ್ಲಿನ ನರ್ಸಿಂಗ್ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ತಾಲ್ಲೂಕಿನ 135 ಶಾಲೆಗಳಿಗೆ 107 ಉಪಯುಕ್ತ ಪುಸ್ತಕಗಳ ಒಂದು ಪೆಟ್ಟಿಗೆಯನ್ನು ಪ್ರತೀ ಶಾಲೆಗೆ ನೀಡಿದರು. ಶಾಸಕ ಎಚ್.ಡಿ. ರೇವಣ್ಣ, ಭವಾನಿ ರೇವಣ್ಣ ಸುಧಾಮೂರ್ತಿ ಅವರನ್ನು ಸನ್ಮಾನಿಸಿದರು. ಶಿಕ್ಷಣ ಇಲಾಖೆಯ ಉಪದರ್ದೇಶಕ ಚಾಮರಾಜ್, ತಹಶೀಲ್ದಾರ್ ವಿ. ಮಂಜುನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಶಿವರಾಜ್, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಟಿ. ಮಲ್ಲೇಶ್ ವೇದಿಕೆಯಲ್ಲಿದ್ದರು.

ಕಾರ್ಯಕ್ರಮದ ನಂತರ ಸುಧಾಮೂರ್ತಿ ಲಕ್ಷ್ಮೀನರಸಿಂಹ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಶೀಘ್ರದಲ್ಲೇ ನಾಲ್ಕು ಪುಟಗಳ ವರ್ಣರಂಜಿತ
ಜನಮಿತ್ರ
JANA MITRA
ಜಿಲ್ಲೆಯ ಪ್ರಥಮ ವರ್ಣರಂಜಿತ ದಿನಪತ್ರಿಕೆ

# ಇಂದು ಹೊಳೆನರಸೀಪುರಕ್ಕೆ ಸುಧಾಮೂರ್ತಿ

## ಜೆಡಿಎಲ್‌ಪಿ ನಾಯಕ ಎಚ್.ಡಿ. ರೇವಣ್ಣ ನಿವಾಸದಲ್ಲಿ ಮುದ್ದೆ ಊಟ

**ಹೊಳೆನರಸೀಪುರ:** ಸಮಾಜ ಸೇವಕಿ, ಬರಹಗಾರ್ತಿ, ಅಂಕಣಗಾರ್ತಿಯೂ ಆದ ಬೆಂಗಳೂರಿನ ಇನ್ಫೋಸಿಸ್ ಫೌಂಡೇಷನ್ ಮುಖ್ಯಸ್ಥೆ ಸುಧಾ ನಾರಾಯಣಮೂರ್ತಿ ಅವರು ಆ.21ರಂದು ಹೊಳೆನರಸೀಪುರಕ್ಕೆ ಭೇಟಿ ತಾಲೂಕಿನ 135 ಶಾಲೆಗಳಿಗೆ ಇನ್ಫೋಸಿಸ್ ಫೌಂಡೇಷನ್ ವತಿಯಿಂದ 10 ಲಕ್ಷ ಮೌಲ್ಯದ ಪುಸ್ತಕಗಳನ್ನು ಶಾಲೆಗೊಂದು ಗ್ರಂಥಾಲಯ ಕಾರ್ಯಕ್ರಮದಡಿಯಲ್ಲಿ ವಿತರಣೆ ಮಾಡಲಿದ್ದಾರೆ.

ಇದೇ ಸಂದರ್ಭದಲ್ಲಿ ತಾಲೂಕಿನ ಇತಿಹಾಸ ಪ್ರಸಿದ್ಧ ದೇವಾಲಯಗಳಿಗೆ ಭೇಟಿ ನೀಡಲಿದ್ದು ಬಳಿಕ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ರೇವಣ್ಣ ಅವರ ನಿವಾಸದಲ್ಲಿ ಮುದ್ದೆ ಊಟ ಸವಿಯಲಿದ್ದಾರೆ. ಸ್ವತಃ ಸುಧಾ ಅವರೇ ಮುದ್ದೆ ಊಟ ಬಯಸಿದ ಹಿನ್ನೆಲೆಯಲ್ಲಿ ರೇವಣ್ಣ ಅವರ ನಿವಾಸದಲ್ಲಿ ಊಟದ ಏರ್ಪಾಟು ಮಾಡಲಾಗಿದೆ. ಇಲ್ಲಿನ 135 ಶಾಲೆಗಳಿಗೆ ಪ್ರತಿ ಶಾಲೆಗೆ 6783




■ ತಾಲೂಕಿಗೆ ಇದೇ ಪ್ರಥಮ ಬಾರಿಗೆ ಭೇಟಿ ನೀಡುತ್ತಿರುವ ಇನ್ಫೋಸಿಸ್ ಮುಖ್ಯಸ್ಥೆ ಸುಧಾ ನಾರಾಯಣಮೂರ್ತಿ

ಮೌಲ್ಯದ ವಿವಿಧ ಪ್ರಕಾಶನದ ಶೈಕ್ಷಣಿಕವಾಗಿ ಸಹಕಾರಿಯಾಗುವಂತಹ ಪುಸ್ತಕಗಳನ್ನು ದೇಣಿಗೆ ನೀಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಥಳೀಯ ಶಾಸಕರಾದ ಎಚ್.ಡಿ.ರೇವಣ್ಣ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಾಮರಾಜು ಆಗಮಿಸಲಿದ್ದಾರೆ ಎಂದು ಬಿಇಒ ಶಿವರಾಜ್ ತಿಳಿಸಿದ್ದಾರೆ.

ತಾಲೂಕಿಗೆ ಇದೇ ಪ್ರಥಮ ಬಾರಿಗೆ ಭೇಟಿ ನೀಡುತ್ತಿರುವ ಇನ್ಫೋಸಿಸ್ ಮುಖ್ಯಸ್ಥೆ ಸುಧಾ ನಾರಾಯಣಮೂರ್ತಿ ಅವರು ಬೆಳಗ್ಗೆ ತಾಲೂಕಿನ ಮಾವಿನಕೆರೆ ಬಳಿಯ ಬೆಟ್ಟದ ಶ್ರೀ ರಂಗನಾಥಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಲಿರುವರು. ನಂತರ ಪಟ್ಟಣದಲ್ಲಿನ ಇತಿಹಾಸ ಪ್ರಸಿದ್ಧ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇಗುಲಕ್ಕೆ ಭೇಟಿ ನೀಡುವರು. ನಂತರ ಇಲ್ಲಿನ ಆಧ್ಯಾತ್ಮ ಪ್ರಕಾಶ ಕಾರ್ಯಾಲಯಕ್ಕೆ ಭೇಟಿ ನೀಡಿ ಅಲ್ಲಿನ ಆಧ್ಯಾತ್ಮ ಪ್ರಚಾರಾರ್ಥ ಸಂಸ್ಥೆಯ ಬಗ್ಗೆ ತಿಳಿದು, ಅಲ್ಲಿಯೇ ಫಲಹಾರ ಸೇವಿಸುವರು. ನಂತರ ಪುಸ್ತಕ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸುವ ಸುಧಾ ನಾರಾಯಣಮೂರ್ತಿ ಅವರು ಮಧ್ಯಾಹ್ನ ಶಾಸಕ ಎಚ್.ಡಿ.ರೇವಣ್ಣ ಅವರ ನಿವಾಸದಲ್ಲಿ ಭೋಜನ ಸ್ವೀಕರಿಸುವ ಕಾರ್ಯಕ್ರಮವಿದೆ.

# ಸುಧಾಮೂರ್ತಿಯವರಿಗೆ ಸನ್ಮಾನ




ಶಾಲೆಗೊಂದು ಗ್ರಂಥಾಲಯ ಕಾರ್ಯಕ್ರಮದಡಿಯಲ್ಲಿ ಪುಸ್ತಕಗಳನ್ನು ವಿತರಿಸಲು ಹೊಳೆನರಸೀಪುರಕ್ಕೆ ಆಗಮಿಸಿದ್ದ ಇನ್ಫೋಸಿಸ್ ಪ್ರತಿಷ್ಠಾನದ ಸುಧಾಮೂರ್ತಿಯವರನ್ನು ಶಾಸಕ ಹೆಚ್.ಡಿ. ರೇವಣ್ಣ, ಭವಾನಿ ರೇವಣ್ಣ ಸನ್ಮಾನಿಸಿದರು. ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಚಾಮರಾಜ್, ತಹಸೀಲ್ದಾರ್ ವಿ. ಮಂಜುನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಶಿವರಾಜ್, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಟಿ. ಮಲ್ಲೇಶ್ ಮತ್ತಿತರರು ಉಪಸ್ಥಿತರಿದ್ದರು.

24/08/11